ಸಮಿತಿಯ ೨೦೧೧-೧೨ನೇ ಸಾಲಿನ ೧೨೭ ಮತ್ತು ೧೨೭ನೇ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

8.ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ೨೦೧೨-೧೩ನೇ ಸಾಲಿನ ಪೂರಕ ಅಂದಾಜು-ಗಳನ್ನು (ಎರಡನೇ ಕಂತು) ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

(ಅನುಬಂಧ–2)

9.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಅನಧಿಕೃತ ದಾಖಲೆ ಸೃಷ್ಟಿಸಿ ವಾಣಿಜ್ಯ ಮಳಿಗೆ ಕಟ್ಟಡ ನಿರ್ಮಿಸಿ ಮರು ಮಾರಾಟ ಮಾಡಿರುವ ಬಗ್ಗೆ.

ಶ್ರೀ ಗೂಳಿಹಟ್ಟಿ.ಡಿ.ಶೇಖರ್:- ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರವಾದ ಹೊಸದುರ್ಗಾ ತಾಲ್ಲೂಕಿನ ಸರ್ವೆ ನಂಬರ್ ೫೯ ರಲ್ಲಿ ಸುಮಾರು ಕೋಟಿ ರೂಪಾಯಿ ಬೆಲೆ ಬಾಳುವಂತಹ ಜಾಗದಲ್ಲಿ ಅನಧಿಕೃತ ದಾಖಲೆಗಳ ಮುಖಾಂತರ ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಈ ಹಿಂದೆ ೨-೩ ಬಾರಿ ಸದನದಲ್ಲಿಯೂ ಪ್ರಸ್ತಾಪ ಮಾಡಿದ್ದೆ. ಆಗ ವಿಷಯವು ಕೋರ್ಟ್‌ನಲ್ಲಿದೆ, Subjudice ಆಗುತ್ತದೆ ಎಂದು ಉತ್ತರ ಕೊಟ್ಟಿದ್ದರು. ಆದರೆ, ಕೋರ್ಟ್‌ನಲ್ಲಿದ್ದ ಸಂದರ್ಭದಲ್ಲಿ ವಕೀಲರು ಸರಿಯಾಗಿ ಅದನ್ನು ಗಣನೆಗೆ ತೆಗೆದುಕೊಳ್ಳದೇ, ಇವತ್ತು ಅದೇ ಜಾಗವನ್ನು ಕೋರ್ಟ್‌ನಲ್ಲಿ ಅವರ ಪರವಾಗಿ ಆಗಿ ಇವತ್ತು ಆ ಜಾಗವನ್ನೇ ಸುಮಾರು ಒಂದೂವರೆ ಎರಡು ಕೋಟಿ ರೂಪಾಯಿಗೆ ಮರು ಮಾರಾಟ ಮಾಡಿದ್ದಾರೆ. ಕೋಟ್ಯಾಂತರ ಬೆಲೆಬಾಳುವ ಸಾರ್ವಜನಿಕ ಕಂದಾಯ ಜಾಗ ಏನಿದೆ